ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳ ಪಟ್ಟಿ

ಮಂಗನ ಕಾಯಿಲೆಗೆ ಲಸಿಕೆ ತಯಾರಿಸುವ ಬಗ್ಗೆ

(೪೨೨) ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಆರೋಗ್ಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧. ೧೯೮೫ರ ಅಂತ್ಯದೊಳಗೆ ಮಂಗನ ಖಾಯಿಲೆಗೆ ಲಸಿಕೆ ತಯಾರಾಗುವುದಾಗಿ ಸರ್ಕಾರದವರು ಘೋಷಿಸಿದರೂ ಕೂಡ ಲಸಿಕೆ ತಯಾರಿಕೆಯಲ್ಲಿ ವಿಳಂಬಕ್ಕೆ ಕಾರಣವೇನು ?

೨. ಇದು ಯಾವಾಗ ತಯಾರು ಆಗುವುದಾಗಿ ಸ್ಪಷ್ಟವಾಗಿ ತಿಳಿಸಲಾಗುವುದೇ ?

೩. ಬೆಳ್ತಂಗಡಿ ತಾಲ್ಲೂಕಿನಲ್ಲಿ ಮಂಗನ ಕಾಯಿಲೆಯಿಂದ ಮೃತಪಟ್ಟ ೬ ಕುಟುಂಬದವರಿಗೆ ಪರಿಹಾರ ಇನ್ನೂ ಸಿಗದಿರಲು ಕಾರಣವೇನು ?

೪. ಸದರಿ ೬ ಕುಟುಂಬದವರಿಗೆ ಯಾವಾಗ ಪರಿಹಾರವನ್ನು ನೀಡಲಾಗುವುದು ?

೫. ಮಂಗನ ಕಾಯಿಲೆ ರೋಗ ತಗುಲಿ ಗಂಭೀರವಾಗಿ ಕೆಲಸ ಮಾಡಲು ಅಶಕ್ತರಿಗೆ ರೂ. ೫೦೦-೦೦ ರಂತೆ ಪರಿಹಾರ ನೀಡುವುದಾಗಿ ಸರ್ಕಾರ ಘೋಷಿಸಿದರೂ ಕೂಡ ಅದನ್ನು ಇನ್ನೂ ಕೊಡದಿರಲು ಕಾರಣವೇನು ಹಾಗೂ ಅದನ್ನು ಯಾವಾಗ ಕೊಡಲಾಗುವುದು?

ಶ್ರೀ ಎಚ್. ಎಲ್. ತಿಮ್ಮೇಗೌಡ.—(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

೧. ಎರಡು ಯಂತ್ರಗಳು ಭಾರತದಲ್ಲಿ ದೊರೆಯದ ಕಾರಣ ಇವುಗಳನ್ನು ಹೊರದೇಶದಿಂದ ಆಮದು ಮಾಡಿಕೊಳ್ಳಬೇಕಾಗಿದೆ.

೨. ಪ್ರಾಯೋಗಿಕ ಲಸಿಕೆಯು ತಯಾರಾದ ಸಮಯದಿಂದ ಸಾಮಾನ್ಯವಾಗಿ ೨½ ವರ್ಷಗಳಿಂದ ೩ ವರ್ಷಗಳು ಬೇಕಾಗುತ್ತದೆ. ಸುಮಾರು ೧೯೮೭-೮೮ರಲ್ಲಿ ಪ್ರಯೋಗಕ್ಕೆ ಸಿಗುವ ಸಾಧ್ಯತೆ ಇದೆ.

೩. ಪೂರ್ಣ ಮಾಹಿತಿಯು ದೊರಕದೇ ಇದ್ದುದರಿಂದ ವಿಳಂಬವಾಗಿದೆ. ಈಗ ಈ ಪ್ರಕರಣಗಳು ಪರಿಶೀಲನೆಯಲ್ಲಿವೆ.

೪. ಸಾಧ್ಯವಾದಷ್ಟು ಬೇಗ.

೫. ಕೂಲಂಕಷವಾಗಿ ಈ ಸಲಹೆಯನ್ನು ಪರಿಶೀಲಿಸಿದ ನಂತರ ಇದು ವ್ಯವಹಾರಿಕವೆಂದು ಕಂಡು ಬರುವುದಿಲ್ಲ.

೬. ನಮ್ಮ ರಾಜ್ಯದಲ್ಲಿ ಮಂಗನ ಕಾಯಿಲೆಯಲ್ಲದೆ ಇತರ ರೋಗಗಳಿಗೂ ಜನರು ತುತ್ತಾಗುತ್ತಾರೆ. ಕೆಲವೊಂದು ಪೂರಕವಾಗಿ ಪರಿಣಮಿಸಿದರೆ, ಕೆಲವು ರೋಗಗಳು ರೋಗಿಗಳನ್ನು ಅಂಗವಿಕಲರನ್ನಾಗಿ ಇಲ್ಲವೆ ದುರ್ಬಲರನ್ನಾಗಿ ಮಾಡುತ್ತವೆ. ಇಂತಹ ಎಲ್ಲಾ ರೀತಿಯ ಜನರಿಗೂ ಪರಿಹಾರ ಕೊಡುವುದು ಸಾಧ್ಯವಾಗದು. ಆದರೂ ಇವರಿಗೆ ಸಾಧ್ಯವಾದಷ್ಟು ವೈದ್ಯಕೀಯ ನೆರವು ನೀಡಲಾಗುವುದು.

ಕುಂದಾಪುರ ಆರಕ್ಷಕ ಠಾಣೆಯವರು ವರದಕ್ಷಿಣೆ ಮಂತ್ರಿ ಪುನರ್ ವಿವಾಹ ವಿಚಾರದಲ್ಲಿ ಸ್ವೀಕರಿಸಿರುವ ದೂರುಗಳು

೭೮೫. ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ (ಕುಂದಾಪುರ).— ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ೧೯೮೩ನೇ ಜನವರಿಯಿಂದ ಕುಂದಾಪುರ ಆರಕ್ಷಕ ಠಾಣೆಯಲ್ಲಿ ವರದಕ್ಷಿಣೆ ಪ್ರಕರಣ ಹಾಗೂ ಮರು ಮದುವೆ ಬಗ್ಗೆ ಮಹಿಳೆಯರಿಂದ ಬಂದ ದೂರುಗಳೆಷ್ಟು ?

(ವರ್ಷವಾರು ವಿವರ ನೀಡುವುದು)

(ಆ) ಬಂಲ್ಕುಂಡ ದೂರುಗಳ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಬಿ. ರಾಚಯ್ಯ (ಮಾನ್ಯ ಗೃಹ ಸಚಿವರು).—

(ಅ) ವರದಕ್ಷಿಣೆಯ ಪ್ರಕರಣದ ದೂರುಗಳು ಈ ಕೆಳಕಂಡಂತಿವೆ.—

೧. ೧೯೮೩ ... ಇಲ್ಲ.

೨. ೧೯೮೪ ... ಇಲ್ಲ.

೩. ೧೯೮೫ ... ೧

ಮರುಮದುವೆ ದೂರಂಗಳು ಈ ಕೆಳಕಂಡಂತಿವೆ.—

೧. ೧೯೮೩ ... ಇಲ್ಲ

೨. ೧೯೮೪ ... ೩

೩. ೧೯೮೫ ... ಇಲ್ಲ.

ಆ) ೧೯೮೫ರಲ್ಲಿ ಕೊಟ್ಟಿರುವ ವರದಕ್ಷಿಣೆಯ ದೂರನ್ನು ಅಪರಾಧ ಸಂಖ್ಯೆ ೯೧/೮೫ ಕಲಂ ೩೪೨ ೩೨೪-೫೦೬ ರೆಡ್‌ವಿತ್ ೩೪ ಭಾ. ದಂ. ಸಂ. ಪ್ರಕಾರ ಮತ್ತು ಕಲಂ ೪ ವರದಕ್ಷಿಣೆ ಕಾಯ್ದೆ ಅನ್ವಯ ಗುನ್ನೆಯೊಂದನ್ನು ನೊಂದಾಯಿಸಿ ತನಿಖೆ ನಡೆಸಲಾಗುತ್ತಿದೆ.

೧೯೮೪ರಲ್ಲಿ ಕೊಟ್ಟಿರುವ ಮೂರು ಮರು ಮದುವೆಯ ದೂರುಗಳ ಬಗ್ಗೆ ತನಿಖೆ ಮಾಡಲಾಗಿದೆ ತನಿಖೆಯ ಪ್ರಕಾರ ೨ ದೂರುಗಳಲ್ಲಿ ಸಂಜ್ಞೆಯ ಅಪರಾಧವು ಕಂಡುಬರಲಿಲ್ಲವಾದ ಕಾರಣ ಮೊಕದ್ದಮೆ ಯನ್ನು ದಾಖಲು ಮಾಡಲಿಲ್ಲ. ಆದರೆ ಎದುರು ಅರ್ಜಿದಾರರಿಗೆ ಸೂಕ್ತ ಎಚ್ಚರಿಕೆ ನೀಡಲಾಗಿದೆ. ಇನ್ನೊಂದು ದೂರು ಸಿವಿಲ್ ವಿವಾದಕ್ಕೆ ಸಂಬಂಧಪಟ್ಟಿದ್ದ ಕಾರಣ ಸಿವಿಲ್ ನ್ಯಾಯಾಲಯದ ಮೊರೆ ಹೋಗಲು ಅರ್ಜಿದಾರರಿಗೆ ತಿಳಿಸಲಾಗಿದೆ.

ಶಹಬಾದ್ ನಗರದಲ್ಲಿ ಪೊಲೀಸರಿಗಾಗಿ ಮನೆ ಕಟ್ಟಿಸುವ ಬಗ್ಗೆ

೮೨೧. ಶ್ರೀ ಕೆ. ಬಿ. ಶಾಣಪ್ಪ (ಶಹಬಾದ್).—ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಶಹಬಾದ್ ನಗರದಲ್ಲಿ ಪೊಲೀಸರಿಗಾಗಿ ಮನೆ ಕಟ್ಟಿಸಲು ಇಲಾಖೆಯವರು ಜಮೀನನ್ನು ಖರೀದಿಸಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(ಆ) ಹಾಗಿದ್ದಲ್ಲಿ, ಎಷ್ಟು ಎಕರೆ ಮತ್ತು ಯಾವ ವರ್ಷದಲ್ಲಿ ಅದನ್ನು ಕೊಂಡುಕೊಳ್ಳಲಾಯಿತು ?

(ಇ) ಈ ಜಾಗದಲ್ಲಿ ಎಷ್ಟು ಮನೆಗಳನ್ನು ನಿರ್ಮಿಸಲಾಗುವುದು ಮತ್ತು ಅದಕ್ಕೆ ತಗಲುವ ವೆಚ್ಚವೆಷ್ಟು ?

(ಈ) ಸದರಿ ಮನೆಗಳ ನಿರ್ಮಾಣ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಬಿ. ರಾಚಯ್ಯ (ಮಾನ್ಯ ಗೃಹ ಸಚಿವರು).—

(ಅ) ಹೌದು.

(ಆ) ೧೨ ಎಕರೆ ೩೮ ಗುಂಟೆ ಜಮೀನನ್ನು ೧೯೮೪ನೇ ಇಸವಿಯಲ್ಲಿ ಕೊಂಡುಕೊಳ್ಳಲಾಯಿತು.

(ಇ) ಈ ಜಾಗದಲ್ಲಿ ೬೦ ವಾಸದ ಮನೆಗಳನ್ನು ನಿರ್ಮಿಸಬಹುದಾಗಿದೆ. ಮತ್ತು ಇದಕ್ಕೆ ತಗಲುವ ಅಂದಾಜು ವೆಚ್ಚ ನಲವತ್ತು ಲಕ್ಷ ರೂಪಾಯಿಗಳು.

(ಈ) ಶಹಬಾದ್‌ನಲ್ಲಿ ಆರಕ್ಷಕ ಸಿಬ್ಬಂದಿಗಳಿಗೆ ವಸತಿ ಗೃಹಗಳನ್ನು ನಿರ್ಮಿಸುವ ಕಾರ್ಯವನ್ನು ಕರ್ನಾಟಕ ರಾಜ್ಯ ಆರಕ್ಷಕ ವಸತಿ ನಿಗಮವು ಹಂತ ಹಂತವಾಗಿ ತೆಗೆದುಕೊಳ್ಳುತ್ತದೆ.